ಒಂದೇ ವಾರದ ಹಿಂದೆ ವಾರಾಂತ್ಯದ ಊಟವನ್ನು ಎರಡೂ ಮನೆಯವರೂ ಜೊತೆಯಲ್ಲಿ ಮಾಡಿದ್ದೆವು. ಕರಾವಳಿಯ ಮೀನು ಸಾರನ್ನು "ಲಾಟ್ ಆಫ್ ಫ್ಲೇವರ್ಸ್" ಎನ್ನುತ್ತಲೂ, ಬಸಲೆ ಸೊಪ್ಪು ಸಾರನ್ನು "ಓಹ್ ಇಂಡಿಯನ್ ಸ್ಪಿನಾಚ್" ಎಂತಲೂ ಎರಡೆರಡು ಬಾರಿ ಆಸೆಪಟ್ಟು ಬಡಿಸಿಕೊಂಡು ಮೆಲ್ಲುತ್ತಿದ್ದ ಟೆಡಿಯ ಚಿತ್ರ ಕಣ್ಣ ಮುಂದೆ ಬಂತು. ಒಂದೇ ವಾರದ ಅಂತರದಲ್ಲಿ ಮನೆ ಮಾರಿ ದೇಶಬಿಟ್ಟು ಹೋಗುವ ನಿರ್ಧಾರವನ್ನು ಹೇಗೆ ತೆಗೆದುಕೊಂಡಿದ್ದಾರು ಇವರಿಬ್ಬರೂ ಅಂತ ಸಂಕಟವಾಯಿತು. ನನ್ನಿಂದ ಏನಾದರೂ ಸಹಾಯ ಬೇಕಿದ್ದರೆ ಛಿಡೆಯಿಲ್ಲದೇ ಕೇಳು ಎಂದು ಬ್ರಿಯಾನಾಳನ್ನು ಕೋರಿಕೊಂಡೆ.

"ಅದೇ ವಿಷಯವನ್ನು ನಿನ್ನ ಹತ್ತಿರ ಮಾತನಾಡಬೇಕಿತ್ತು. ಟೇಮಿಗೆಂದು ಕೊಂಡ ಕ್ರಿಸ್‌ಮಸ್ ಉಡುಗೊರೆಗಳು ಹಾಗೆಯೇ ಇವೆ. ಎಲ್ಲದರ ಪ್ಯಾಕೇಜನ್ನೂ ಎಸೆದು ಬಿಟ್ಟಿದ್ದೇವೆ. ಪ್ಯಾಕೇಜಿಂಗ್ ಇಲ್ಲದೇ ರಿಟರ್ನ್ ಮಾಡಲೂ ಆಗುತ್ತಿಲ್ಲ. ಟೇಮಿ ಜಾಣೆ. ಇಷ್ಟು ಚಿಕ್ಕ ವಯಸ್ಸಿಗೇ ಎಷ್ಟೊಂದು ಸಂಗತಿಗಳನ್ನು ಹೇಳದೇ ಅರ್ಥಮಾಡಿಕೊಂಡಿದ್ದಾಳೆ. ಇಷ್ಟವಾದ ಒಂದೆರಡು ಆಟಿಕೆಗಳನ್ನು ಇಟ್ಟುಕೊಂಡು ಉಳಿದದ್ದನ್ನು ನಿನ್ನ ಮಗುವಿಗೆ ಕೊಡಲು ಒಪ್ಪಿಕೊಂಡಿದ್ದಾಳೆ."

"ಅಷ್ಟು ಆಸೆಪಟ್ಟು ಕೊಂಡಿದ್ದು. ಲಾಗೋಸ್‌ಗೆ ಕೊಂಡೊಯ್ಯಲು ಸಾಧ್ಯವಿಲ್ಲವೇ?"

"ಇಲ್ಲ, ನೋಡು ಇದೇ ಒಂದು ಲಗೇಜು ಬ್ಯಾಗಿನಷ್ಟಾಗಿದೆ. ಫ್ಲೈಟಿನಲ್ಲಿ ಎಕ್ಸ್‌ಟ್ರಾ ಪ್ಯಾಕೇಜು ದುಬಾರಿಯಾಗುತ್ತದೆ. ಟೇಮಿಯ ಆಟಿಕೆಗಳನ್ನು ನಿನ್ನ ಮಗುವೇ ಆಡಿಕೊಂಡರೆ ನನಗಷ್ಟು ಸಮಾಧಾನ" ಅಂದಳು.

ಬೇರೆ ದಾರಿಯಿಲ್ಲದೇ, "ಈಗಲೇ ತೆರೆಯುವುದು ಬೇಡ. ನಾನು ನಂತರ ಬ್ಯಾಗನ್ನು ತಲುಪಿಸುತ್ತೇನೆ" ಅಂತ ಒಪ್ಪಿಕೊಂಡೆ.

ಬ್ರಿಯಾನಾ ಮತ್ತು ಟೇಮಿ ತೆರಳಿದ ಮೇಲೆ ಮಗುವನ್ನು ಮಲಗಿಸಿ ಸೂಟ್‌ಕೇಸು ತೆಗೆದರೆ ದಂಗಾಗುವಷ್ಟು ಆಟಿಕೆಗಳಿದ್ದವು. ಚಿತ್ರ ಮುಟ್ಟಿದರೆ ವರ್ಣಮಾಲೆ ಉಲಿವ ಪಿಯಾನೋ, ಮೂರು ಬಗೆಯ ಬಿಲ್ಡಿಂಗ್ ಬ್ಲಾಕುಗಳು, ಬೇರೆ ಬೇರೆ ಬಣ್ಣದ ಟೆಡ್ಡಿ ಬೇರ್‌ಗಳು, ಹತ್ತಾರು ಕತೆ ಪುಸ್ತಕಗಳು, ಕ್ರೆಯಾನ್ ಬಣ್ಣಗಳು, ಹತ್ತಾರು ಬಗೆಯ ಕಾರು, ಬಸ್ಸು, ಟ್ರಕ್ಕುಗಳ ಸೆಟ್ಟು, ಬಟನ್ ಒತ್ತಿಟ್ಟರೆ ಕುಣಿವ,

